Impact Factor (SJIF): 6.126 E-ISSN: 2583-1615, P-ISSN: 3049-3498

International Journal of Research in Academic World

Received: 03/November/2025 IJRAW: 2025; 4(12):67-70 Accepted: 14/December/2025

# ಪುತಿನ ಅವರ ಲೇಖನಗಳಲ್ಲಿ ದೈವಿಕತೆಗೆ ಸಂಬಂಧಿಸಿದ ವಿಚಾರಗಳು

*[1]ಡಾ. ರಾಜೇಶ್ ಜೆ

*[1]ಪ್ರಾಂಶುಪಾಲರು, ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಪದವಿ ಕಾಲೇಜು, ಕೆ.ಆರ್ ರಸ್ತೆ, ಬೆಂಗಳೂರ, ಕರ್ನಾಟಕ, ಭಾರತ.

**ಸಾರಾಂಶ**

ಪುತಿನ ಎಂಬ ಕಾವ್ಯನಾಮದಿಂದಲೇ ಪ್ರಸಿದ್ಧರಾದ ಪುರೋಹಿತ ತಿರುನಾರಾಯಣ ಅಯ್ಯಂಗಾರರು ಕನ್ನಡದ ನವೋದಯ ಸಾಹಿತ್ಯದ ಲೇಖಕರು. ನವೋದಯ ಕಾಲಘಟ್ಟದ ಮೂವರು ಪ್ರಮುಖ ಕವಿಗಳಾದ ಕುವೆಂಪು, ಬೇಂದ್ರೆ, ಕುವೆಂಪು ಅವರಲ್ಲಿ ಇವರೂ ಪ್ರಮುಖರು. ಕವಿತೆಗಳು, ಕಾವ್ಯ, ಗೀತನಾಟಕ, ಕಥೆ, ಅನುವಾದ, ವಿಮರ್ಶೆ ಹೀಗೆ ಹಲವು ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿದ್ದಾರೆ. ಹಣತೆ, ಮಾಂದಳಿರು, ಮಲೆದೇಗುಲ ಇತ್ಯಾದಿ ಕವನ ಸಂಕಲನಗಳನ್ನೂ,ಅಹಲ್ಯೆ, ಗೋಕುಲನಿರ್ಗಮನ, ಹಂಸದಮಯಂತಿ, ಶ್ರೀರಾಮ ಪಟ್ಟಾಭಿಷೇಕದಂತಹ ರೂಪಕಗಳನ್ನು ರಚಿಸಿದ್ದಾರೆ.ಕಾವ್ಯ ಕುತೋಹಲ, ರಸಪ್ರಜ್ಞೆ, ದೀಪರೇಖೆ ಇವರ ವಿಮರ್ಶಾಕೃತಿಗಳು.

**ಪ್ರಮುಖ ಪದ:** ಅಸ್ಪೃಶ್ಯ, ವಿದ್ಯಾರ್ಥಿ, ಯುವ ಸಮುದಾಯ.

**ಪರಿಚಯ**

ಪುತಿನ ಅವರ ಹುಟ್ಟೂರು ಮಂಡ್ಯ ಜಿಲ್ಲೆಯ ಮೇಲುಕೋಟೆ. ಈ ಊರು ಕರ್ನಾಟಕದಲ್ಲಿ ಶ್ರೀ ವೈಷ್ಣವ ಪರಂಪರೆಗೆ ಹೆಸರಾದುದು. ಶ್ರೀ ರಾಮಾನುಜಾಚಾರ್ಯರು 10 ನೇ ಶತಮಾನದಲ್ಲಿ ತಮಿಳುನಾಡಿನಿಂದ ಇಲ್ಲಿಗೆ ಬಂದ ಮೇಲೆ ಈ ಕ್ಷೇತ್ರ ವೈಷ್ಣವ ಪರಂಪರೆಯ ಧಾರ್ಮಿಕ ಕ್ಷೇತ್ರವಾಗಿ ರೂಪುಗೊಳ್ಳಲು ಶ್ರಮಿಸಿದರು. ಅವರೊಂದಿಗೆ ಮೇಲುಕೋಟೆಯಲ್ಲಿ ವೈದಿಕ ಪರಂಪರೆಯೊಂದಿಗೆ ವೈಷ್ಣವ ಸಂಸ್ಕೃತಿಯ ಅಯ್ಯಂಗಾರರ ಕುಟುಂಬಗಳು ನೆಲೆ ನಿಂತ ಪರಿಣಾಮವಾಗಿ ಈ ಭಾಗದಲ್ಲಿ ವೈಷ್ಣವ ಸಂಸ್ಕೃತಿ ಪ್ರಸಾರವಾಯಿತು. ಇಂಥಹ ಶ್ರೀಕ್ಷೇತ್ರಗಳಲ್ಲಿ ಯದುಗಿರಿ, ನಾರಾಯಣಗಿರಿ, ಯಾದವಾದ್ರಿ ಮುಂತಾದ ಪೌರಾಣಿಕ ನಾಮಗಳಿಂದ ಕರೆಯಲ್ಪಡುವ ಮೇಲುಕೋಟೆಯೂ ಸಹ ಒಂದಾಗಿದೆ. ಪ್ರಮುಖವಾಗಿ ಶ್ರೀವೈಷ್ಣವ ಪರಂಪರೆಯನ್ನೇ ಉಸಿರಾಗಿಸಿಕೊಂಡಿರುವ ಚಲುವನಾರಾಯಣ ಮತ್ತು ಯೋಗಾನರಸಿಂಹ ದೇವಾಲಯಗಳು ಈ ಮೇಲುಕೋಟೆಯನ್ನು ಧಾರ್ಮಿಕವಾಗಿ ಜಗತ್ಪ್ರಸಿದ್ಧವಾಗಿಸಿವೆ. ಊರ ತುಂಬೆಲ್ಲಾ ಹತ್ತಾರು ಗುಡಿ–ಗೋಪುರಗಳು, ಸಾಲು ಮಂಟಪಗಳು, ಕೊಳ–ಕಲ್ಯಾಣಿಗಳು ಇದರ ಶೋಭೆಗೆ ಸಾಕ್ಷೀಭೂತವಾಗಿವೆ. ಬೆಟ್ಟದ ಸಾಲು, ಕಣಿವೆ ಕಂದರಗಳು, ಕೆರೆ ಕಟ್ಟೆಗಳು ಪ್ರಾಕೃತಿಕ ಸೌಂದರ್ಯವನ್ನು ಹೆಚ್ಚಿಸಿವೆ. ಶ್ರೀ ರಾಮಾನುಜಾಚಾರ್ಯರಿಂದ ಮೊದಲುಗೊಂಡ ಈ ಕ್ಷೇತ್ರವು ಆಲಯಗಳಿಂದ ತುಂಬಿದ್ದು, ತಮಿಳುನಾಡಿನಿಂದ ವಲಸೆ ಬಂದವರೆನ್ನಲಾದ ವೈಷ್ಣವ ಪರಂಪರೆಯ ಅಯ್ಯಂಗಾರರು ಆಲಯಗಳ ಆಶ್ರಯವನ್ನು ಪಡೆದೇ ತಮ್ಮ ಬದುಕನ್ನು ಕಟ್ಟಿಕೊಂಡರೆಂಬುದರಲ್ಲಿ ಎರಡು ಮಾತಿಲ್ಲ. ಊರು ಇತರ ಸಮುದಾಯಗಳನ್ನೊಳಗೊಂಡಿದ್ದರೂ ಸಹ ಆಲಯಾಶ್ರಿತ ಸಮುದಾಯದವರು ಮೇಲುಗೈ ಸಾಧಿಸಿಕೊಂಡಿರುವವರು ಎಂಬುದರಲ್ಲಿ ಅನುಮಾನವೇ ಇಲ್ಲ.

ಪರಿಣಾಮವಾಗಿ ಹತ್ತಾರು ಬೃಹತ್ ದೇಗುಲಗಳಿ, ಕಲ್ಯಾಣಿ, ಕೊಳಗಳು, ಗೋಪುರಗಳು, ಸಾಲುಮಂಟಪಗಳು ಆ ಕಾಲದ ರಾಜರುಗಳ ಸಹಕಾರದಿಂದ ನಿರ್ಮಾಣವಾದವು. ಅಯ್ಯಂಗಾರರ ಹಲವಾರು ಕುಟುಂಬಗಳು ಈ ದೇಗುಲಗಳಲ್ಲಿ ಅರ್ಚಕರಾಗಿ, ಪರೋಹಿತರಾಗಿ, ಕಾಯಕವನ್ನು ಮಾಡುತ್ತಾ ಬಂದಿವೆ. ಆಲಯಗಳ ಆಶ್ರಯವನ್ನು ಪಡೆದ ಈ ವರ್ಗಗಳು ದೇಗುಲಗಳಲ್ಲಿ ಪೂಜೆ, ಪುನಸ್ಕಾರಗಳು, ಉತ್ಸವಗಳು ಜಾತ್ರೆಗಳು, ಮಹೋತ್ಸವಗಳು ಹೀಗೆ ಇತ್ಯಾದಿಯಾಗಿ ದಿನಂಪ್ರತಿ ಆರಾಧನೆಗಳನ್ನು ಮಾಡುತ್ತಾ ಸ್ವಾಮಿ ಸೇವೆಗಳನ್ನು ನಿಷ್ಠೆಯಿಂದ ಮಾಡುತ್ತಾ ಬಂದಿವೆ. ಕಾಲಕಾಲಕ್ಕೆ ಜರುಗುವ ಈ ಎಲ್ಲಾ ವಿಧದ ಆರಾಧನೆಗಳನ್ನು ಇಡೀ ಸಮುದಾಯವೇ ದೈವಿಕತೆಗೆ ಸಂಬಂಧಿಸಿದ ವೈದಿಕ ಹಾಗೂ ಪೌರಾಣಿಕ ವಿಚಾರಗಳ ಹಿನ್ನೆಲೆಯಲ್ಲಿ ಆಚರಣೆಗೊಳಿಸುತ್ತಾ ಬಂದಿದ್ದಾರೆ. ವ್ರತ, ನಿಯಮ ಉತ್ಸವ ಇತ್ಯಾದಿಗಳ ಬಗ್ಗೆ ಪಾರಾಯಣ ಮಾಡುತ್ತಾ, ಹಾಡುತ್ತಾ, ಸ್ತೋತ್ರಗೈಯುತ್ತಾ ಸಂಭ್ರಮಿಸುತ್ತಾರೆ.

ವೇದ, ಪುರಾಣ, ಗೀತೆ ಪಾರಾಯಣಗಳಿಂದ ಇಡೀ ಕುಟುಂಬಗಳು, ಸಮುದಾಯಗಳು, ಗುಡಿ–ಆಲಯಗಳು, ಇಡೀ ಊರೇ ಮೊಳಗುತ್ತಿರುತ್ತದೆ. ಇಂತಹ ಹಿನ್ನೆಲೆಯಲ್ಲಿ ಬಂದ ಪುತಿನ ಅವರು

*Corresponding Author: ಡಾ. ರಾಜೇಶ್ ಜೆ

ತಮ್ಮ ಬರವಣಿಗೆಗಳಲ್ಲಿ ವೈದಿಕ ಪರಂಪರೆಯ ವೈಷ್ಣವ ಮತದೊಳಗೆ ಆಚರಣೆಗೊಳ್ಳುತ್ತಿರುವ ಭಕ್ತಿಸಂಬಂಧಿತ ಸಮಸ್ತ ಸಂಗತಿಗಳನ್ನು ಕತೆಗಳು, ಕವಿತೆಗಳು, ಕಾವ್ಯ, ಗೀತ ನಾಟಕಗಳು, ರೂಪಕಗಳು ಲಲಿತ ಪ್ರಬಂಧಗಳು ಹಾಗೂ ಬಿಡಿ ಬಿಡಿ ಲೇಖನಗಳಲ್ಲಿ ದಾಖಲುಗೊಳಿಸಿದ್ದಾರೆ. ಇಂತಹ ದೈವ ಸಂಬಂಧಿತ ಕೆಲವು ಆಚರಣೆಗಳನ್ನು ಆ ಲೇಖನಗಳ ಹಿನ್ನೆಲೆಯಲ್ಲಿ ಚರ್ಚಿಸಿ ವಿಮರ್ಶೆಗೊಳಪಡಿಸಲಾಗಿದೆ.

**ಪ್ರವೇಶ**

ವೈದಿಕ ಪರಂಪರೆಯೊಳಗೆ ದೈವ, ದೇಗುಲ, ಜಾತ್ರೆ, ಮಹೋತ್ಸವ, ಹಬ್ಬ, ಆಚರಣೆಗಳಂತಹ ನಾನಾ ರೀತಿಯ ಸಂಪ್ರದಾಯಗಳು ನಮ್ಮ ಜನಮಾನಸದೊಳಗೆ ಹಾಸುಹೊಕ್ಕಾಗಿ ಬೆರೆತುಹೋಗಿವೆ. ಇವೆಲ್ಲವುಗಳನ್ನು ತಮ್ಮ ಬದುಕಿನುದ್ದಕ್ಕೂ ಅಳವಡಿಸಿಕೊಂಡು ನಡೆಸಿಕೊಂಡು, ಉಳಿಸಿಕೊಂಡು ಬಂದ ಪರಿಣಾಮವಾಗಿ ಧಾರ್ಮಿಕ ಶ್ರದ್ಧೆ, ನಂಬಿಕೆ, ಭಕ್ತಿ, ಮೊದಲಾದವುಗಳು ಇಂದಿಗೂ ಜೀವಂತವಾಗಿರಲು ಸಾಧ್ಯವಾಗುತ್ತಿವೆ. ಹಲವಾರು ತೀರ್ಥಕ್ಷೇತ್ರಗಳು ನೂರಾರು ದೈವಗಳು ನಮ್ಮ ಜನರ ಧಾರ್ಮಿಕ ಭಾವನೆಗಳ ಮೇಲೆ ಸಾಕಷ್ಟು ಪರಿಣಾಮಗಳನ್ನು ಬೀರಿವೆ, ದೇಗುಲಗಳಿರುವ ಪ್ರದೇಶಗಳು ಶ್ರೀತೀರ್ಥಕ್ಷೇತ್ರಗಳಾಗಿ ರೂಪುಗೊಳ್ಳುತ್ತಿವೆ. ಪ್ರವಾಸಿ ಕೇಂದ್ರಗಳಾಗಿ ಬದಲಾಗುತ್ತಿವೆ.

ಇಂತಹ ಶ್ರೀವೈಷ್ಣವ ಪರಂಪರೆಯ ಸಮುದಾಯದಲ್ಲಿ ಜನಿಸಿ ಅಗಾಧ ಪಾಂಡಿತ್ಯವನ್ನು ಪಡೆದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕತೆ, ಕವನ, ಕಾವ್ಯ, ಗೀತನಾಟಕ, ಲೆಖನ, ಅನುವಾದ, ಚಿಂತನ ಮುಂತಾದ ಬರವಣಿಗೆಗಳ ಮೂಲಕ ಸಾಮಾನ್ಯ ಸಂಗತಿಗಳಿಂದಿಡಿದು ಧಾರ್ಮಿಕ ವಿಚಾರಗಳವರೆಗೆ ತಮ್ಮ ಬರವಣಿಗೆ ಮಾಡುತ್ತಾ ವಿಶಿಷ್ಟ ರೀತಿಯಲ್ಲಿ ದೈವಾಚರಣೆಗೆ ಸಂಬಂಧಿಸಿದ ಬಹಳಷ್ಟು ವಿಚಾರಗಳನ್ನು ದಾಖಲು ಮಾಡುತ್ತಾರೆ. ಆದುದರಿಂದ ಇದರ ಮೂಲಕವಾಗಿ ಅವರ ಯದುಗಿರಿಯ ನಾಡಿನ ಧಾರ್ಮಿಕ ವಿಚಾರಗಳು ನಮಗೆ ಬಹಳ ಹತ್ತಿರದಿಂದ ಗೋಚರಿಸುವಂತೆ ಮಾಡಿದ ಕೀರ್ತಿ ಕವಿ ಪುತಿನ ಅವರ ವಿಶೇಷಗಳಲ್ಲೊಂದು. ದೈವ, ದೇಗುಲ, ಆಚರಣೆ, ಸಂಪ್ರದಾಯಗಳನ್ನು ನೋಡುತ್ತಾ, ಮಾಡುತ್ತಾ ಬಂದು ಬರೆದ ಫಲವಾಗಿ ಓದುಗರಿಗೆ ದೈವಲೋಕದ ಸೊಬಗನ್ನು ತೆರೆದಿಡುತ್ತಾರೆ.

ದೈವಾಚರಣೆಗಳಿಗೆ ಸಂಬಂದಿಸಿದಂತಹ ಅವರ ಲೇಖನಗಳಲ್ಲಿ ಗೋಕುಲಾಷ್ಟಮಿ, ರಥಸಪ್ತಮಿ, ನಾರಾಯಣನ ಗುಡಿಯಲ್ಲಿ, ವೈರ್ ಮಾಳಿಗೆಯ ಉತ್ಸವ, ತಿರುನಕ್ಷತ್ರ, ನಾರಾಯಣನ ಗುಡಿಯೆಂಬ ನನ್ನ ಪ್ರಬಂಧ, ದೇಗುಲ, ರಾಮ ಸ್ಮರಣೆ, ಕೃಷ್ಣ ಸ್ಮರಣೆ, ದೇವರು, ಹೀಗೆ ಬಹಳಷ್ಟು ಲೇಖನಗಳನ್ನು ಪಟ್ಟಿ ಮಾಡುತ್ತಾ ಹೋಗಬಹುದು.

ಪುತಿನ ಅವರ ಗೋಕುಲಾಷ್ಟಮಿ ಕತೆ ಶ್ರೀಕೃಷ್ಣ ಜನನದ ಸಂಭ್ರಮದ ಆಚರಣೆಯನ್ನಾಚರಿಸುವುದೇ ವಿಶೇಷ ಬಗೆಯದು. ಇತ್ತೀಚೆಗೆ ಜನಸಾಮಾನ್ಯರರು ಬಹಳಷ್ಟು ಆಚರಣೆಗಳನ್ನು ಗ್ರಾಮೀಣರಾದಿಯಾಗಿ ನಗರ ಪ್ರದೇಶಗಳವರೆಗೆ ಆಧುನಿಕ ರೀತಿಯಲ್ಲಿ ಸಡಗರದಿಂದ ಆಚರಿಸುವುದನ್ನು ಕಾಣಬಹುದು. ಆದರೆ ಅದು ಇತ್ತೀಚಿನ ಬೆಳವಣಿಗೆ ಮಾತ್ರವಾಗಿದೆ. ಒಬ್ಬರನ್ನೊಬ್ಬರು ನೋಡಿ ಅನುಕರಿಸುತ್ತಾ ಬಂದ ಬಗೆಯಾಗಿದೆ. ಶಾಲಾ ಕಾಲೇಜುಗಳಲ್ಲಿ ವಿಶೇಷವಾಗಿ ಮಕ್ಕಳಿಗೆ ಶ್ರೀಕೃಷ್ಣನ ವೇಷ ಭೂಷಣಗಳನ್ನು ತೊಡಿಸಿ ಸಂಭ್ರಮಿಸುವುದಂಟು. ದೇವಾಲಯಗಳಿಗೆ ಹೋಗಿ ಪೂಜೆ, ಪುನಸ್ಕಾರಗಳು, ಅರ್ಚನೆ, ಭಜನೆ ಇತ್ಯಾದಿಗಳಲ್ಲಿ ತೊಡಗುವರು. ಆದರೆ ಪುತಿನ ಅವರು ಗೋಕುಲಾಷ್ಟಮಿಯನ್ನು ಕಟ್ಟಿಕೊಡುವ ವಿಧಾನವೇ ಬೇರೆಯದು.

ಗೋಕುಲಾಷ್ಟಮಿ ಬರುವುದೇ ಅಷ್ಟಮಿಯ ದಿನ. ಅಂದರೆ ಪೌರ್ಣಿಮೆಗೂ ಅಮಾವಾಸೆಗೂ ನಡುವಿನ ದಿನ. ಸೆರಮನೆಯಲ್ಲಿ ಶ್ರೀಕೃಷ್ಣನ ಜನನವಾಗುತ್ತದೆ. ಹಾಗಾಗಿ ಇವರ ಗೋಕುಲಾಷ್ಟಮಿ ಆಚರಣೆ ಅಷ್ಟಮಿಯ ಚಂದ್ರೋದಯದ ಬಳಿಕ ಅಂದರೆ ನಡುರಾತ್ರಿಯನ್ನು ಕಾಯುತ್ತಾರೆ, ಅಲ್ಲಿಯವರೆಗೆ ಬಗೆಬಗೆಯ ತಿನಿಸುಗಳನ್ನು ಸಿದ್ಧಪಡಿಸಿಕೊಂಡು ಫಲ ಪುಷ್ಪಗಳಿಂದ ಅಲಂಕರಿಸಿ ಗೀತಪಾರಾಯಣ ಮಾಡುವುದು ವಿಶೇಷವಾಗಿದೆ. ಅವರೇ ಹೇಳುವಂತೆ

"ಒಂದು ಗಳುವನ್ನು ಸೀಳಿ ಒಂದು ಹಂದರ ಬಿಗಿದು ಫಲವಸ್ತ್ರದ ಚಪ್ಪರ ಕಟ್ಟಿದೆವು. ಫಲ ವಸ್ತ್ರಕ್ಕೆ ಸೀಬೆ ಹಣ್ಣು, ಸೌತೆಕಾಯಿ, ದಾಳಿಂಬೆ ಹೀಚು, ಯಥೇಚ್ಛವಾಗಿ ಮಾವಿನ ಸೊಪ್ಪು ಕಟ್ಟಿದೆವು. ಸಂಜೆಯಲ್ಲಿ ಮಿ. ಒದು, ಮಡಿಯುಟ್ಟು ಗೀತ ಪಾರಾಯಣ ಮಾಡಿದೆ. ಸಹಸ್ರನಾಮವನ್ನು ಹೇಳಿ, ತುಳಸಿಯಿಂದ ಅರ್ಚಿಸಿದೆ. ಅಘ್ಯ ಕೊಟ್ಟೆ. ನವನೀತವನ್ನು ನಿವೇದಿಸಿದೆ"[1] ಮನೆಯಲ್ಲಿ ಗೋಕುಲಾಷ್ಟಮಿಯನ್ನು ದೊಡ್ಡವರು ಶಾಸ್ತ್ರೋಕ್ತವಾಗಿ ಆಚರಿಸಿದರೂ ಅದು ಪೂರ್ಣಗೊಳ್ಳುವುದು ಮಕ್ಕಳಿಂದಲ್ಲವೇ?.

"ಗೋಕುಲಾಷ್ಟಮಿಗೂ ಮಕ್ಕಳಿಗೂ ಏನೋ ಒಂದು ಆಂತರ್ಯವಾದ ಸಂಬಂಧವಿದೆ. ಕೃಷ್ಣನ ಯೌವನಕ್ಕಿಂತಲೂ ಶೈಶವವಲ್ಲವೇ ನಮ್ಮ ಮನಸ್ಸನ್ನು ಮೋಹಿಸಿರುವುದು, ಹೃದಯವನ್ನು ಸೆಳೆದಿರುವುದು. ಶಿಶುಗಳಲ್ಲದೆ ಈ ದಿನಕ್ಕೆ ಕಳೆ ಬರುವುದಿಲ್ಲ. ಮಕ್ಕಳೇ ನಮ್ಮಂಥ ನಾಸ್ತಿಕರಿಗೂ ಆಸ್ತಿಕರಿಗೂ ಶ್ರೀಕೃಷ್ಣನ ಜನನ ವಾರ್ತೆಯನ್ನು ತರುವ ಹರಿಕಾರರು. ಶಿಶುಗಳಿಲ್ಲದೆ ಈ ದಿನಕ್ಕೆ ಕಳೆ ಬರುವುದಿಲ್ಲ. ಮನಸ್ಸಿಗೆ ಕೃಷ್ಣನುದಯವಾಯಿತೆಂಬ ನಂಬಿಕೆ ಹುಟ್ಟುವುದಿಲ್ಲ"[2]. ಆದರೆ ಈ ಫಲವಸ್ತ್ರದ ಚಪ್ಪರಕ್ಕೆ ನಾನಾ ರೀತಿಯ ಫಲ ಪುಷ್ಪಗಳಾದ ಹೊಂಬಾಳೆ, ಅಡಕೆ, ಹುಣಸೆ, ಸೀತಾಫಲ, ರಾಂಫಲ, ನಿಂಬೆ, ಮಾದಲ, ಬಾಳೆಗೊನೆ, ಬಾಳೆಹಣ್ಣು, ಎಳನೀರು ಹೀಗೆ ಇನ್ನೂ ಏನೇನೂ ಅಲಂಕರಿಸುವುದುಂಟು ಅವುಗಳಲ್ಲಿ ಕೆಲವುಗಳನ್ನು ಹುಡುಗರು ಕದ್ದು ತಂದು ಸಂಭ್ರಮಿಸುವುದೂ ಉಂಟು. ಶ್ರೀಕೃಷ್ಣ ಜನನವಾಗುವವರೆಗೂ ಯಾವ ಮಕ್ಕಳಿಗೂ ಆಹಾರ, ತಿಂಡಿಗಳ ಸಮರ್ಪಣೆಯಾಗುವುದಿಲ್ಲ. ಅಲ್ಲಿಯವರೆಗೂ ವೇದಶಾಸ್ತ್ರ, ಗೀತೋಪದೇಶಗಳನ್ನು ಪಾರಾಯಣ ಮಾಡುತ್ತಿರಬೇಕು. ಹೀಗೆ ವೈದಿಕರ ಮನೆಗಳಲ್ಲಿ ಪ್ರತಿ ಮನೆಗಳಲ್ಲಿಯೂ ಪ್ರತಿ ವರುಷವೂ ಶ್ರೀಕೃಷ್ಣನ ಜನನ ಆಗೇ ತೀರುತ್ತದೆ. ವೈದಿಕರ ಮನೆಗಳಲ್ಲಿ ಗೋಕುಲಾಷ್ಟಮಿಯನ್ನು ಹೀಗೆ ಶ್ರದ್ಧ ಭಕ್ತಿಯಿಂದ ಆಚರಿಸಿದರೆ. ಜನಸಾಮಾನ್ಯರಿಗೆ ಅಥವಾ ಗ್ರಾಮೀಣ ಭಾಗದ ರೈತಾಪಿ ಕುಟುಂಬಗಳಿಗೆ ಇಂಥ ಆಚರಣೆಗಳಾಗಲೀ, ಸಂಪ್ರದಾಯಗಳಾಗಲೀ ಎಲ್ಲಿಂದ ಬರಬೇಕು? ಅವರಿಗೆ ಅವರ ಬದುಕಿನ ಬಡಿದಾಟವೇ ಸಾಕಾಗಿರುತ್ತದೆ. ಆದರೆ ಇತ್ತಿಚಿನ ದಿನಗಳಲ್ಲಿ ನಗರದಿಂದಿಡಿದು ಗ್ರಾಮೀಣದವರೆಗೂ ಬಹುತೇಕ ಎಲ್ಲಾ ವರ್ಗದವರೂ ಅನುಕರಣೆಯಿಂದಲೋ, ಅಂಧ ಭಕ್ತಿಯಿಂದಲೋ ಗೋಕುಲಾಷ್ಟಮಿಯನ್ನು ತಮಗೆ ತೋಚಿದ ರೀತಿಯಲ್ಲಿ ಆಚರಿಸುವುದನ್ನು ವೈದಿಕರ ಮನೆಗಳಲ್ಲಿ ಅಂದು ಆಚರಿಸುತ್ತಿದ್ದ ಬಗೆಯನ್ನು ಪುತಿನ ಅವರು ಚಿತ್ರಿಸಿದ್ದಾರೆ.

ಮೇಲುಕೋಟೆಯಲ್ಲಿ ನಡೆಯುವ ಬಹುತೇಕ ಉತ್ಸವಗಳಲ್ಲಿ ಚಲುವನಾರಾಯಣನಿಗೆ ಸಂಬಂಧಿಸಿದವುಗಳೇ ಹೆಚ್ಚಾಗಿವೆ. ಈ ದೇಗುಲಗಳಲ್ಲಿರುವ ಆರಾಧಕರಿಗೆ ಇಂಥವುಗಳನ್ನು ಜರುಗಿಸುವುದನ್ನು ಹೊರತು ಬೇರಿನ್ನೇನಿದೆ ಎಂಬ ಪ್ರಶ್ನೆ ಮೂಡದಿರಲಾರದು. ಆಚರಣೆಗೊಳ್ಳುವ ಬಹುತೇಕ ಹಿನ್ನೆಲೆಗಳಲ್ಲಿ ಕೆಲವುಗಳ ಹಿನ್ನೆಲೆಗಳು ಎಲ್ಲರಿಗೂ ತಿಳಿದಿರುವುದಿಲ್ಲ. ಆದರೆ ಒಮದೊಂದು ಆಚರಣೆಯ ಹಿಂದೆಯೂ ಯಾವುದಾದರೊಂದು ಪೌರಾಣಿಕ ಹಿನ್ನೆಲೆ ಇದ್ದೇ ಇರುತ್ತದೆ.

ಶತ್ರುಗಳ ಕಾಟ ರಾಜ ಮಹಾ ರಾಜರಿಗೆ ಮನುಷ್ಯರಿಗೆ ಪ್ರಾಣಿ ಪಕ್ಷಿಗಳಿಗಷ್ಟೇ ಅಲ್ಲ ನಮ್ಮನ್ನುಸೃಷ್ಟಿಸಿದ ದೇವತೆಗಳಿಗೂ ಈ ದುಷ್ಟರ

ಕಾಟ ತಪ್ಪಿದ್ದಲ್ಲ. ಚಲುವನಾರಾಯಣನು ರಾಕ್ಷಸನನ್ನು ಸಂಹರಿಸಿದ ವಿಜಯದ ಕುರುಹಾಗಿ ಈ ವೈಲ್ ಮಾಳಿಗೆ ಉತ್ಸವ ಜರುಗುತ್ತದೆ. ಈ ವೈದಿಕರು ಹಿನ್ನೆಲೆ ಹೇಳುವಾಗ ಕೆಲವೊಮ್ಮೆ ಸ್ಪಷ್ಟವಾಗಿ ಹೇಳಿರಲಾರರು. ಆ ರಾಕ್ಷಸ ಯಾರು ಏನು ಎಂಬ ಮಾಹಿತಿಯನ್ನು ಲೇಖಕರು ಸ್ಪಷ್ಟ ಪಡಿಸುವುದಿಲ್ಲ. ಚಲುವನಾರಾಯಣನನ್ನೇ ಶ್ರೀ ಹರಿಯೆಂದು ಕರೆಯುವುದು, ಶ್ರೀ ಕೃಷ್ಣನೆಂದು ಕರೆಯುವಾಗ ಯಾವ ಶತೃವಾದರೂ ಆಗಬಹುದು.

ಚಲುವನಾರಾಯಣನು ಅಸುರನನ್ನು ಸಂಹರಿಸಿ ಮರಳಿ ಬಂದ ಸಂಭ್ರಮವನ್ನೇ ವೈಲ್ ಮಾಳಿಗೆ ಉತ್ಸವ ಎಂದು ಕರೆಯಲಾಗುತ್ತದೆ. ಇದು ನಡೆಯುವುದು ಶುದ್ಧ ಬೇಸಿಗೆಯ ಕಾಲದಲ್ಲಿ. ಇಂತಹ ಆಚರಣೆಗಳಿಗೆ ಮಳೆಯ ಕಾಟವಿರುವುದಿಲ್ಲವೆಂಬ ಕಾರಣಕ್ಕೇ ಇಂತಹ ಕಾಲದಲ್ಲಿ ಆಚರಿಸಲಾಗುತ್ತದೆ. ಮಾಳಿಗೆಯೆಂಬುದು ಸಹಜವಾಗಿ ಮಹಡಿಯನ್ನು ಸಂಕೇತಿಸುತ್ತದೆ. 'ವೈಲ್' ಎಂಬುದು ಬೇಸಿಗೆ ಎಂದರ್ಥ ಹಾಗಾಗಿ ಬೇಸಿಗೆಯ ಕಾಲದಲ್ಲಿ ಮಹಡಿಯ ಮೇಲೆ ನಡೆಯುವ ಉತ್ಸವ ಇದಾಗಿರುತ್ತದೆ. ಅದೂ ಅಮಾವಾಸೆಯ ಕತ್ತಲಿನಲ್ಲಿ ಬೆಳಗುವ ದೀಪಗಳ ನಡುವೆ.

ಅಸುರನನ್ನು ಕೊಂದು ಮರಳಿದ ಚಲುವನಾರಾಯಣನ ಸಂಕೇತವಾದ ಈ ಉತ್ಸವವು ಮಹಡಿಯಲ್ಲಿ ನಡೆಯುತ್ತದೆ. ಅಲಂಕೃತನಾದ ಚಲುವನಾರಾಯಣನ ಉತ್ಸವ ಮೂರ್ತಿಯನ್ನು ಅರ್ಚಕರು ಮಹಡಿಯ ಮೇಲೆ ಕೊಂಡೊಯ್ಯುತ್ತಾರೆ. ಅಲ್ಲಿಗೆ ಒಂದು ಕೋಣೆಯ ಬಾಗಿಲಿನ ಮೂಲಕ ಪ್ರವೇಶ ಮಾಡಿ ಅದರೊಳಗಿರುವ ಇನ್ನೊಂದು ಬಾಗಿಲನ್ನು ತೆರೆದು ಮಹಡಿಯ ಮೇಲೆ ಸೇರಬೇಕು. ಇಲ್ಲಿ ಅರ್ಚಕರಿಗಲ್ಲದೆ ಬೇರಿನ್ನಾರಿಗೂ ಪ್ರವೇಶವಿರಲಾರದು. ಅಲ್ಲಿ ತಲುಪಿದೊಡನೆಯೇ ಕಹಳೆ ಹಾಗೂ ನಗಾರಿಗಳ ದುಂದುಭಿ ಮೊಳಗುತ್ತದೆ. ಅಲ್ಲಿಂದ ವಿಜಯ ಮಾಡಿಸಿಕೊಂಡು ಕೆಳಗೆ ದೇಗುಲದ ಆವರಣಕ್ಕೆ ಪಲ್ಲಕ್ಕಿಯಲ್ಲಿ ಉತ್ಸವಮೂರ್ತಿಯನ್ನು ಗರ್ಭಗುಡಿಯವರೆಗೂ ಪಲ್ಲಕ್ಕಿಯಲ್ಲಿ ಹೊತ್ತು ತರುತ್ತಾರೆ. ಅದನ್ನು ತರುವಾಗ ನೇರವಾಗಿ ಹೊತ್ತು ತರದೆ, ಓಲಾಡುತ್ತಾ, ತೇಲಾಡುತ್ತಾ, ತಾಳ ಮೇಳ, ಗಾನ ಸಂಗೀತದೊಡನೆ ಭಕ್ತಾದಿಗಳು ಸಂಭ್ರಮಿಸುತ್ತಿರುತ್ತಾರೆ. ಭಕ್ತಜನ ಸಮೂಹಗಳು ಯಾವುದೇ ಆಸರ-ಬೇಸರವಿಲ್ಲದೆ, ಸಡಗರ ಸಂಭ್ರಮದಿಂದ ಕಣ್ತುಂಬಿಕೊಳ್ಳುತ್ತಾರೆ. ಈ ಸಂಭ್ರಮವನ್ನು ಕವಿ ಪುತಿನ ಅವರು ಸೋದಾಹರಣವಾಗಿ ವಿವರಿಸುತ್ತಾರೆ. ಹಾಗಾಗಿ ಈ ಉತ್ಸವವು ದೇವಾಲಯ ಆಶ್ರಿತರು ಎಲ್ಲಾ ಸೇರಿ ಈ ವೈಲ್ ಮಾಳಿಗೆ ಉತ್ಸವವನ್ನು ಆಚರಿಸುತ್ತಾರೆ.

ಭಕ್ತಾದಿಗಳು ಹಾಗು ಜನಸಾಮಾನ್ಯರಿಗೂ ಈ ದೇಗುಲಗಳ, ದೈವದ ಬಗೆಗಿನ ಆಚರಣೆಗಳ ನೇರ ಪಾಲುಗಾರಿಕೆ ತುಸು ದೂರವೇ ಇದೆ. ಆದರೆ ಪುತಿನ ಅವರು ಈ ಅಂತರದಲ್ಲಿಲ್ಲ. ಮೇಲುಕೋಟೆಯಲ್ಲಿ ಈ ಸಮುದಾಯ ನೆಲೆಗೊಳ್ಳಲು ಕಾರಣವೇ ಈ ದೇಗುಲಗಳು ಮತ್ತು ಗರ್ಭಗುಡಿಯೊಳಗಿರುವ ಮೂರ್ತಿಗಳು. ಇವರೆಲ್ಲರೂ ಅವುಗಳಿಗೆ ವಾರಸುದಾರರು. ಆದುದರಿಂದ ಈ ದೈವ ಸನ್ನಿಧಿಯಲ್ಲಿ ಒಂದು ಹನಿ ನೀರು ನೆಲಕ್ಕೆ ಬೀಳುವುದರಿಂದಿಡಿದು ಜಾರಿಗೊಳ್ಳುವ ಎಲ್ಲಾ ಕೈಂಕರ್ಯಗಳೂ ಇವರ ಹಕ್ಕುಗಳೆಂದೂ ಎಲ್ಲಾ ಆಚರಣೆಗಳೂ ಹೀಗೀಗೇ ನಡೆಯಬೇಕೆಂಬ ನಿಯಮಗಳು, ಮಂತ್ರ, ಪೂಜಾ ವಿಧಾನ ನೃತ್ಯ, ಉಡುಗೆ, ತೊಡುಗೆ, ಅಲಂಕಾರ, ನೈವೇಧ್ಯದಾದಿಯಾಗಿ ಅವರೆಲ್ಲರೂ ಪರಿಣತರು, ಕರಗತರು. ಒಂದೆಳೆಯ ನಿಯಮ ಮೀರಿದರೂ ಸಹ ಮಹಾ ಪ್ರಳಯವೇ ಜರುಗಿ ಹೋಯಿತೆನ್ನುವ ಎಚ್ಚರ ಈ ಆಲಯಾಶ್ರಿತರ ರಕ್ತದ ಕಣಕಣಗಳಲ್ಲಿ ಬೆರೆತು ಹೋಗಿದೆ. ಇದೇ ಅವರ ಬದುಕು, ಉಸಿರು. ಇನ್ನು ರಥಸಪ್ತಮಿಯ ಆಚರಣೆಯ ಬಗೆಗೆ ಲೇಖಕರ ಅನುಭವಗಳನ್ನು ನೋಡಬಹುದು. ಶ್ರೀ ಕ್ಷೇತ್ರದಲ್ಲಿ ಇತರ ಉತ್ಸವಗಳಂತೆ ರಥಸಪ್ತಮಿಯೂ ಸಂಭ್ರಮ ಸಡಗರಗಳಿಂದ ನಡೆಯುವುದನ್ನು ಮನೋಜ್ಞವಾಗಿ ವರ್ಣಿಸುತ್ತಾರೆ. ರಥಸಪ್ತಮಿಯನ್ನು ಬಹಳಷ್ಟು ದೇವಾಲಯಗಳಲ್ಲಿ ಪೂಜಾಸೇವೆಗಳು, ಭಕ್ತಾದಿಗಳಿಗೆ ಊಟ, ಪ್ರಸಾದ ಸೇವೆ, ಜಾತ್ರೆ, ರಥೋತ್ಸವ ಹೀಗೆ ನಡೆಯುವುದುಂಟು. ಯದುಗಿರಿಯೂ ಅದಕ್ಕೆ ಹೊರತಾದುದೇನೂ ಅಲ್ಲ. ಇದು ನಡೆಯುವ ಕಾಲ ಮಾಘ ಮಾಸದಲ್ಲಿ. ಆಗತಾನೆ ಶಿಶಿರಋತು ಮುಗಿದು ಬೇಸಿಗೆಯ ಕಾಲ ಆವಿರ್ಭವಿಸುವ ಸಂಕ್ರಮಣದ ದಿನ. ಇದನ್ನು ರಥಸಪ್ತಮಿಯೆಂದು ಕರೆಯಲಾಗುತ್ತದೆ.

ಇದು ಪ್ರತಿ ವರ್ಷವೂ ನಡೆಯುವ ಉತ್ಸವ. ಇದೊಂದು ಜಾತ್ರಾ ಮಹೋತ್ಸವವಾಗಿದ್ದು, ನೆರೆ ಹೊರೆಯ ಊರುಗಳ ಭಕ್ತಾದಿಗಳು, ಹಾಗೂ ದೂರ ದೂರಗಳಿಂದ ಸಾಕಷ್ಟು ಸಂಖ್ಯೆಯಲ್ಲಿ ಬಂದು ಪುನೀತರಾಗಿ ಹೋಗುವುದುಂಟು. ಇನ್ನು ರಥಸಪ್ತಮಿಗೆಂದು ಊರ ಹೆಂಗಳೆಯರು ಪರ್ವನಿಗದಿಯಂತೆ ತಮ್ಮ ತಮ್ಮ ಮನೆಯ ಮುಂದೆ ನಾನಾ ವಿಧವಾಗಿ ರಂಗೋಲಿಗಳನ್ನು ಬಿಡಿಸಿ ಸಿಂಗರಿಸುವುದೊಂದು ಸಡಗರದ ವಿಷಯವೇ ಆಗಿದೆ. ಈ ಉತ್ಸವದ ಬಗೆಗಿನ ಪೌರಾಣಿಕ ಹಿನ್ನೆಲೆಗಳನ್ನು ಲೇಖಕರು ಪರೋಕ್ಷವಾಗಿ ಕಟ್ಟಿಕೊಡುತ್ತಾರೆ. ಸ್ವಾಮಿಯು ಬಿಜಯಗೈಯುವ ರಥದ ಬಗ್ಗೆ ತಾಯಿಯು ಮಗುವಿಗೆ ಭಾವಪೂರ್ವಕವಾಗಿ ವಿವರಿಸುತ್ತಾಳೆ.

ದೇವ ಮಂದಿರದ ಮುಂದೆ ನಿಂತಿದ್ದ ಚಿನ್ನದ ರೇಕುಗಳಿಂದ ಕೂಡಿದ ಏಳು ಅಶ್ವಗಳ ರಥವನ್ನು ಕುರಿತು "ನಾಳೆ ಸೂರ್ಯ ತನ್ನ ಹಳೆಯ ರಥದಿಂದಿಳಿದು ಈ ರಥವನ್ನೇರಿ ಸಂಚಾರ ಹೊರಡುತ್ತಾನೆ ಮಗು,- ತಾನೇರುವುದಕ್ಕೆ ಮುಂಚೆ ದೇವರಿಗೊಪ್ಪಿಸಿ ಪುಣ್ಯ ಪಡೆಯುವುದಕ್ಕೆ ಅದನ್ನು ಇಂದು ಇಲ್ಲಿಗೆ ಕಳುಹಿಸಿದ್ದಾನೆ.ನಾಳೆ ಆತನ ಏಳು ಕುದುರೆಗಳೂ ಬರುತ್ತವೆ. ಸೂರ್ಯನಿಗೂ ನಮ್ಮ ಚಲುವನಾರಾಯನನನ್ನು ಕಂಡರೆ ಅಷ್ಟು ಶ್ರದ್ಧಾಭಕ್ತಿ. ಹೀಗೆ ರಥ ಕಳಿಸುವುದಕ್ಕೆ ಒಂದು ವರ್ಷವೂ ತಪ್ಪುವುದಿಲ್ಲ"[3]. ಹೀಗೆ ತಾಯಿ ತನ್ನ ಮಗುವಿಗೆ ತಿಳಿಸುವ ಮೂಲಕ ದೈವ, ಅದರ ಹಿನ್ನೆಲೆ, ಉತ್ಸವಗಳನ್ನು ಆಚರಿಸುವ ಹಿಂದಿನ ಸಂಗತಿಗಳನ್ನು ಕಟ್ಟಿಕೊಡುವ ಮೂಲಕ ಹೊಸ ಪೀಳಿಗೆಗೆ ಭಾವಪೂರ್ವಕವಾಗಿ ತಿಳಿಸಿಕೊಡುತ್ತಾಳೆ. ಷಷ್ಠಿಯ ದಿನ ಕಳೆದು ಸಪ್ತಮಿಯ ದಿನ ಸೂರ್ಯೋದಯವಾಗುತ್ತಿದ್ದಂತೆ ಸುತ್ತ ಮುತ್ತಲ ಹಳ್ಳಿಯ ಜನಗಳು ಪರಿಷೆಗೆ ಜಮಾಯಿಸುವುದು, ಉತ್ಸವವನ್ನು ನೋಡಿ ಕಣ್ತುಂಬಿಕೊಳ್ಳುವುದು ಯಾವತ್ತೂ ಕಡಿಮೆಯಾಗುವುದಿಲ್ಲ.

ಓಲಗದ ದನಿ, ನಗಾರಿಯ ನಿನಾದ, ಡೋಲಿನ ಮೊರೆತ, ತುತ್ತೂರಿಯ ಆರ್ಭಟ, ಅವೆಲ್ಲವುಗಳ ನಡುವೆ ಭಕ್ತಾದಿಗಳ ಜಯಘೋಷ ಉತ್ಸವ ಹೊರಡಲನುವಾಗುತ್ತಿದ್ದಂತೆ ಮೇಳೈಸುತ್ತದೆ. ಇದು ಒಂದು ಕಡೆಯಾದರೆ, ಆಲಯಾಶ್ರಿತ ಕುಟುಂಬಗಳ ಹೆಣ್ಣುಮಕ್ಕಳು, ಹೆಂಗಳೆಯರೆಲ್ಲೂ ದೇಗುಲದ ಪ್ರಾಂಗಣದಲ್ಲಿ ಗುಂಪುಗೂಡಿಕೊಂಡು ಚಲುವನಾರಾಯಣನ ಬಗೆಗಿನ ಹಾಡುಗಳನ್ನು ಹಾಡು ಮತ್ತು ಗುಂಪು ನೃತ್ಯದ ಮೂಲಕ ವರ್ಣಿಸುವ ಕುಣಿತಮಾಡುವುದವಿದರ ವಿಶೇಷತೆಗಳಲ್ಲೊಂದು. ಇಂತಹ ಸಂಭ್ರಮಾಚರಣೆಗಳು ಎಲ್ಲಾ ಜಾತ್ರೆ-ಮಹೋತ್ಸವಗಳಲ್ಲೂ ಕಂಡುಬರುತ್ತವೆ. ಆ ಮೂಲಕ ಸ್ವಾಮಿಯ ಸೇವೆಯಲ್ಲಿ ಭಾಗಿಯಾಗಿ ಪುನೀತರಾಗುತ್ತಾರೆ. ಮನೆ ಮನೆಗಳಲ್ಲೂ ವಿಶೇಷವಾದ ಭಕ್ಷ್ಯ ಭೋಜನಗಳನ್ನು ಸಿದ್ಧಪಡಿಸಿಕೊಂಡು ಹಬ್ಬಗಳನ್ನು ಆಚರಿಸುವ ಸತ್ಸಂಪ್ರದಾಯಗಳನ್ನು ಪುತಿನ ಅವರು ಎಳೆಎಳೆಯಾಗಿ ಕಟ್ಟಿಕೊಡುತ್ತಾರೆ.

ಪುತಿನ ಅವರು ಈ ಲೇಖನದಲ್ಲಿ ಹೇಳುವ ಪ್ರಕಾರ ಚಲುವನಿಗೂ ಮನುಷ್ಯರಂತೆ ಜೀವನವಿದೆ. "ಚಲುವನು ಯಾವಾಗಲೂ ಒಂಟಿ ಹಾಗೂ ಮೌನಿ. ಅವನ ನೆಲೆ ಊರಾಚೆಗಿರುವ ಗಿರಿಯಾಚೆ. ಅವನು

ಉತ್ಸವ ಕಾಲದಲ್ಲಿ ಮಾತ್ರ ಎಲ್ಲಿರುತ್ತಾನೋ ಯಾರಿಗೂ ಗೊತ್ತಿಲ್ಲ. ಪ್ರತಿ ದಿನವೂ ಅಲ್ಲಿಗೆ ಹೋಗಿ ಸಹಸ್ರನಾಮಾರ್ಚನೆಯ ಸಮಯದಲ್ಲಿ ಇಲ್ಲಿಗೆ ಬರುತ್ತಾನೆ. ಕೊಂಬೂದಿದಲ್ಲದೆ ಚಲುವನಿಗೆ ಉತ್ಸವವಿಲ್ಲ, ಪೂಜೆಯಿಲ್ಲ, ಸಹಸ್ರನಾಮಾರ್ಚನೆಯಿಲ್ಲ. ತವರು ಮನೆಯಿಂದ ಉತ್ಸವ ಹೊರಡುವುದು ತಡವಾಯಿತೆಂದು ದೇವಿಯ ಮೇಲೆ ಮುನಿಸಿಕೊಂಡು ಮನೆಬಿಟ್ಟು ಕುದುರೆ ಹತ್ತಿ ಅರ್ಧರಾತ್ರಿಯಲ್ಲಿ ಹೊರಟು ಹೋಗುವಾಗ ಮೊಲವನ್ನು ದಾರಿಗೆ ಅಡ್ಡಲಾಗಿ ಬಿಟ್ಟು ಅಪಶಕುನ ಮಾಡಿಸಿ ಊರಿಗೆ ಮರಳಿಸುವಂತಹ ಆಚರಣೆಗಳು"[4] ಇವೆಲ್ಲವುಗಳೂ ಸಹ ಚಲುವರಾಯನಿಗೆ ಸಂಬಂಧಿಸಿದ ಆಚರಣೆಗಳೇ ಆಗಿದ್ದು, ಶಾಸ್ತ್ರ, ಸಂಪ್ರದಾಯಗಳು, ಶಕುನ-ಅಪಶಕುನಗಳು, ಕೋಪ-ಮುನಿಸುಗಳು, ಸಂಸಾರ ತಾಪತ್ರಯಗಳು ಇಲ್ಲಿ ಸಾಮಾನ್ಯ ಮನುಷ್ಯರಂತೆ ದೈವಗಳಿಗೂ ಅನ್ವಯ ಮಾಡಿರುವುದನ್ನು ಗಮನಿಸಬಹುದಾಗಿದೆ.

ಸಪ್ತಾಶ್ವಗಳ ರಥವನ್ನೇರಿ ಸೂರ್ಯಮಂಡಲದ ನಡುವೆ ಕಂಗೊಳಿಸುವ ಚಲುವನ ಬಿಂಕ, ಠೀವಿ, ವಸ್ತ್ರಭೂಷಣಗಳ ಆಡಂಬರ, ಹೂವಿನ ಸಿಂಗಾರ, ಪೂಜೆ ಪುರಸ್ಕಾರಗಳ ವೈಭೋಗ, ರಥಕ್ಕೆ ಹೂಡಿರುವ ಏಳು ಚಿನ್ನದ ಕುದುರೆಗಳು ತಮ್ಮ ರೆಕ್ಕೆ ಬಿಚ್ಚಿ ಮುಂಗಾಲುಗಳನ್ನೆತ್ತಿ ಕೆನೆಯುವ ದೇವಾಶ್ವಗಳ ಮೋಹಕ ದೃಶ್ಯ, ಲಗಾಮುಗಳನ್ನು ಹಿಡಿದಿಟ್ಟುಕೊಂಡಿರುವ ಹುರಿಮೀಸೆಯ ದಿಟ್ಟ ಸಾರಥಿ, ಇವುಗಳನ್ನೆಲ್ಲಾ ಕಂಡು "ನೋಡಿದೆಯೋ, ಈ ರಥ, ಈ ಸಾರಥಿ, ಈ ಕುದುರೆಗಳು ಈ ಜಾತ್ರೆ, ಈ ವಿಜೃಂಭಣೆ, ಈ ತಾಳ ಮೇಳ ಈ ಪುರಸ್ಕಾರಗಳು, ಇವುಗಳೆಲ್ಲಾ ನನ್ನ ಹಕ್ಕು"[5] ಎಂದು ಭಾವಿಸುತ್ತಾರೆ.

## ಮುಕ್ತಾಯ

ಪು.ತಿ.ನ ಅವರು ವೈದಿಕ ಸಂಪ್ರದಾಯದ ಕುಟುಂಬದಲ್ಲಿ ಜನಿಸಿದವರು. ಮೊದಲಾಗಿ ಮಲುಕೋಟೆಯೆಂಬ ಶ್ರೀ ಕ್ಷೇತ್ರವು ಚಲುವನಾರಾಯಣ ಹಾಗೂ ಬೆಟ್ಟದ ನರಸಿಂಹಸ್ವಾಮಿ ದೇಗುಲಗಳಿಂದಲೇ ಶ್ರೀ ಕ್ಷೇತ್ರವಾಗಿ ದೈವಪ್ರಸಿದ್ಧಿ ಪಡೆದಿರುವುದು. ಅಲ್ಲಿ ನಡೆಯುವ ದೈವ-ದೇಗುಲಗಳಿಗೆ ಸಂಬಂದಿಸಿದ ಎಲ್ಲಾ ಆಚರಣೆ ಹಾಗೂ ಸಂಪ್ರದಾಯಗಳನ್ನು ನೋಡಿ ಮಾಡಿ ಕಂಡವರು. ಆದುದರಿಂದಲೇ ತನ್ನೆಲ್ಲಾ ಲೇಖನಗಳಲ್ಲಿ ಅವುಗಳ ಬಗೆಗಿನ ದೈವಾಚರಣೆಗೆ ಸಂಬಂಧಿಸಿದ ಸಂಗತಿಗಳನ್ನು ಎಳೆಎಳೆಯಾಗಿ ವರ್ಣಿಸುತ್ತಾರೆ. ಜನಸಾಮಾನ್ಯರು, ಭಕ್ತಾದಿಗಳು ಇಂತಹ ದೈವ ಸಂಬಂಧಿ ಆಚರಣೆಗಳನ್ನು ಹೊರಗಿನಿಂದ ನೋಡಿ ಅನುಭವಿಸುವುದನ್ನು ಕಾಣಬಹುದು. ಆದರೆ ಭಕ್ತಾದಿ ಸಮೂಹಗಳಿಗೆ ನಿಲುಕದ ಸಾಕಷ್ಟು ವಿಚಾರಗಳನ್ನು ಇವರ ಲೇಖನಗಳಲ್ಲಿ ಭಕ್ತಿ-ಭಾವಪೂರ್ಣವಾಗಿ ಅನಾವರಣ ಮಾಡಿದ್ದಾರೆ. ಹಾಗಾಗಿ ಪು.ತಿ.ನ ಅವರ ಲೆಖನಗಳಲ್ಲಿ ದೈವಿಕತೆಗೆ ಸಂಬಂಧಿಸಿದ ವಿಚಾರಗಳನ್ನು ಅವರ ಲೇಖನಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಸಾಧ್ಯವಾಗುತ್ತದೆ.

## ಉಲ್ಲೇಖ ಗ್ರಂಥಸೂಚಿ


1. ಗೋಕುಲಾಷ್ಟಮಿ, ಪು-04, ಪು.ತಿ.ನ ಸಮಗ್ರ ಲೇಖನಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಜೆ.ಸಿ ರಸ್ತೆ, ಬೆಂಗಳೂರು-2019
2. ಗೋಕುಲಾಷ್ಟಮಿ -ಪು-05, ಪು.ತಿ.ನ ಅವರ ಸಮಗ್ರ ಲೇಖನಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಜೆ.ಸಿ ರಸ್ತೆ, ಬೆಂಗಳೂರು-2019
3. ಗೋಕುಲಾಷ್ಟಮಿ, -ಪು-17 ಪು.ತಿ.ನ ಅವರ ಸಮಗ್ರ ಲೇಖನಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಜೆ.ಸಿ ರಸ್ತೆ, ಬೆಂಗಳೂರು-2019
4. ರಥಸಪ್ತಮಿ -ಪು-20. ಪು.ತಿ.ನ ಅವರ ಸಮಗ್ರ ಲೇಖನಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಜೆ.ಸಿ ರಸ್ತೆ, ಬೆಂಗಳೂರು-2019
5. ವೈಲ್ ಮಾಳಿಗೆ ಉತ್ಸವ, -ಪು-20. ಪು.ತಿ.ನ ಅವರ ಸಮಗ್ರ ಲೇಖನಗಳು,ಕನ್ನಡ ಪುಸ್ತಕ ಪ್ರಾಧಿಕಾರ, ಜೆ.ಸಿ ರಸ್ತೆ, ಬೆಂಗಳೂರು-2019.